## ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐ ಎಫ್ ಎ)
## ಕಲಾ ಅಭ್ಯಾಸ ಕಾರ್ಯಕ್ರಮದಡಿಯಲ್ಲಿ

## ಕಲಾ ನಿರ್ಮಾಣಗಳಿಗೆ ಅರ್ಜಿಗಳನ್ನು ಆಹ್ವಾನಿಸುತ್ತದೆ.

## ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಶುಕ್ರವಾರ, ಜುಲೈ 05, 2024 (July 05, 2024)

ಕಲಾ ಅಭ್ಯಾಸ ಕಾರ್ಯಕ್ರಮದ ಉದ್ದೇಶ, ಕಲಾವಿದರು ತಮ್ಮ ಪ್ರಸ್ತುತ ಅಭ್ಯಾಸವನ್ನು ಹೊಸ ದಿಕ್ಕಿನಲ್ಲಿ ವಿಸ್ತರಿಸಲು ಸಹಕಾರಿಯಾದ ಯೋಜನೆಗಳನ್ನು ಕೈಗೊಳ್ಳುವುದು. ಇವುಗಳು ಪ್ರಯೋಗಶೀಲವಾಗಿದ್ದು, ಈಗಾಗಲೇ ಒಪ್ಪಿತವಾದ ರೂಢಿಗಳನ್ನು ಪ್ರಶ್ನಿಸುವಂಥದ್ದಾಗಿರಬಹುದು, ತಮ್ಮ ಕಲಾ ಪ್ರಕಾರದಲ್ಲಿ ವಸ್ತು, ರೂಪ, ಮಾಧ್ಯಮಗಳ ಹೊಸ ಸಾಧ್ಯತೆಗಳನ್ನು ಹುಡುಕುವಂಥದ್ದಾಗಿರಬಹುದು, ರಂಗಸ್ಥಳ, ಶ್ರೋತೃಗಳು/ ವೀಕ್ಷಕರು, ಅಥವಾ ಸಮುದಾಯದ ಜೊತೆಗೆ ಹೊಸ ರೀತಿಯ ಪಾಲ್ಗೊಳ್ಳುವಿಕೆಯನ್ನು ಹುಡುಕುವಂಥದ್ದಾಗಿರಬಹುದು.

ಕಲಾ ನಿರ್ಮಾಣಗಳು
ಕಲಾವಿದರು ತಮ್ಮ ಕಲಾ ಪಯಣದಲ್ಲಿ, ಸಿದ್ಧ ಚೌಕಟ್ಟುಗಳಿಗೆ ಸವಾಲು ಹಾಕುವ, ಹಾಗೂ/ ಅಥವಾ ಕಲಾ ನಿರ್ಮಾಣ-ಪ್ರಸ್ತುತಿಗಳಲ್ಲಿ ಹೊಸತನವನ್ನು ಅನ್ವೇಷಿಸುವ ಮೂಲಕ, ತಮ್ಮ ಕಲಾಭ್ಯಾಸವನ್ನು ಪುನರವಲೋಕಿಸುವ, ಹೊಸ ದೃಷ್ಟಿಯಿಂದ ನೋಡುವ ಒಂದು ಘಟ್ಟ ಬರಬಹುದು. ಇಂತಹ ಅನ್ವೇಷಣೆಯ ತುಡಿತ ಪ್ರಯೋಗಶೀಲ, ವಿಚಾರಶೀಲ ಕಲಾ ನಿರ್ಮಾಣಗಳ ರೂಪ ಪಡೆಯಬಹುದು.

ಕಲಾ ಅಭ್ಯಾಸ ಕಾರ್ಯಕ್ರಮದಡಿಯಲ್ಲಿ, ಇಂತಹ ಸೃಜನಶೀಲ ಅನ್ವೇಷಣೆಗಳಿಂದ ಹುಟ್ಟುವ ಕಲಾ ನಿರ್ಮಾಣಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತೇವೆ. ಪ್ರಸ್ತಾವನೆಗಳು, ಪ್ರದರ್ಶನ, ಧ್ವನಿ, ದೃಶ್ಯ ಕಲೆ, ಡಿಜಿಟಲ್ ಕಲಾಕೃತಿಗಳು, ಸಾಹಿತ್ಯ ಅಥವಾ ಇವುಗಳನ್ನು ಸೇರಿಸುವ ಅಂತರ್ಶಿಸ್ತೀಯ ಪ್ರಯತ್ನಗಳಾಗಿರಬಹುದು.

ಸಾಕ್ಷ್ಯ ಚಿತ್ರ ಅಥವಾ ಕಾಲ್ಪನಿಕ ಚಲನಚಿತ್ರಗಳನ್ನು ಮೀರಿದ ಪ್ರಸ್ತಾವನೆಗಳನ್ನು ನಾವು ಪ್ರೋತ್ಸಾಹಿಸುತ್ತೇವೆ. ಹಾಗೂ, ರಂಗಭೂಮಿ, ನೃತ್ಯ, ಸಂಗೀತ ಪ್ರದರ್ಶನಗಳು, ಅನುಸ್ಥಾಪನ, ವಸ್ತುಪ್ರದರ್ಶನ, ಪುಸ್ತಕ ಅಥವಾ ನಿಯತಕಾಲಿಕಗಳ ಪ್ರಕಟಣೆ, ಚಲಿಸುವ ಚಿತ್ರ (ಮೂವಿಂಗ್ ಇಮೇಜ್) ಪ್ರಸ್ತುತಿಗಳು, ಆಟಗಳು, ಡಿಜಿಟಲ್ ಕಲಾಕೃತಿಗಳು, ಅಥವಾ ಹಿಂದೆಂದೂ ಕಂಡುಬರದ ಹೊಸ ಮಾಧ್ಯಮಗಳ ಪ್ರಸ್ತಾವನೆಗಳನ್ನು ಸ್ವಾಗತಿಸುತ್ತೇವೆ.

ಯೋಜನೆಯ ಅವಧಿ: ಗರಿಷ್ಠ 18 ತಿಂಗಳುಗಳು

ಬಜೆಟ್: ಗರಿಷ್ಠ ರೂ **5,00,000/-** (ಒಟ್ಟು ವೆಚ್ಚದ ೩೫% ರಷ್ಟು ಹಣವನ್ನು ನಿಮ್ಮ ಗೌರವಧನವಾಗಿ ಪರಿಗಣಿಸಬಹುದು)

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಶುಕ್ರವಾರ, ಜುಲೈ 0೫, 202೪.

ಪ್ರಸ್ತಾವನೆಗಳನ್ನು ಯಾರು ಕಳುಹಿಸಬಹುದು**?**
ಈ ಕಾರ್ಯಕ್ರಮದಡಿಯಲ್ಲಿ ನಿರ್ದಿಷ್ಟ ಕಲಾಪ್ರಕಾರವೊಂದರಲ್ಲಿ ಅಥವಾ ಅಂತರ್ಶಿಸ್ತೀಯವಾಗಿ ಕೆಲಸ ಮಾಡುತ್ತಿರುವ ಕಲಾವಿದರು ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ.

- ಸಂಗೀತ, ಶಬ್ದ, ಪಠ್ಯ, ನೃತ್ಯ, ಚಲನೆ, ನಾಟಕ, ಗೊಂಬೆಯಾಟ, ಕಥೆ ಹೇಳುವುದು, ಇಂದ್ರಜಾಲ, ಸರ್ಕಸ್ ಹಾಗೂ ಇನ್ನಿತರ ಪ್ರದರ್ಶನ ಕಲೆಗಳಲ್ಲಿ ತೊಡಗಿಕೊಂಡ ಕಲಾವಿದರಿರಬಹುದು.
- ಸಿನಿಮಾ (ಸಾಕ್ಷ್ಯಚಿತ್ರ ಹಾಗೂ ಕಲ್ಪನೆಯ ಆಧಾರಿತ), ಅನಿಮೇಶನ್, ಛಾಯಾಚಿತ್ರ, ಅನುಸ್ಥಾಪನ, ಹೊಸ ಮೀಡಿಯಾ, ಕೃತಕ ಬುದ್ಧಿವಂತಿಕೆ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್), ರೊಬೊಟಿಕ್ಸ್, ಸಂವಹನಾತ್ಮಕ ಕಲೆಗಳು, ಗೇಮಿಂಗ್, ಚಿತ್ರಕಲೆ, ಶಿಲ್ಪಕಲೆ, ಪ್ರಿಂಟ್ ತಯಾರಿಕೆ, ಕಾಮಿಕ್ ಪುಸ್ತಕ, ಗ್ರಾಫಿಕ್ ಕಥನ ಇನ್ನಿತರ ಕಲೆಗಳಲ್ಲಿ ತೊಡಗಿಕೊಂಡಿರುವ ದೃಶ್ಯ ಕಲಾವಿದರಿರಬಹುದು.
- ಕಲಾ ನಿರ್ವಾಹಕರು (ಕ್ಯುರೇಟರ್ಸ್) - ಅದರಲ್ಲೂ ಗ್ಯಾಲರಿಗಳ ಹೊರತಾಗಿ ಕೆಲಸ ಮಾಡುತ್ತಿರುವವರು.
- ಕವಿಗಳು, ಕಾದಂಬರಿಕಾರರು, ನಾಟಕಕಾರರು
- ಅಂತರ್ಶಿಸ್ತೀಯ ಕೆಲಸದಲ್ಲಿ ತೊಡಗಿಕೊಂಡಿರುವವರು

**ಅರ್ಹತೆ:**
ನೀವು ಭಾರತೀಯ ನಾಗರಿಕರಾಗಿದ್ದಲ್ಲಿ ಯೋಜನಾ ಪ್ರಸ್ತಾವನೆಯನ್ನು ಕಳುಹಿಸಲು ನೀವು ಅರ್ಹರು. ಯೋಜನೆಯಡಿಯಲ್ಲಿ ನಿಮ್ಮ ಜೊತೆ ಸಹಯೋಗ ಕೈಗೊಳ್ಳುವ ಕಲಾವಿದರು ಕೂಡ ಭಾರತೀಯ ನಾಗರಿಕರಾಗಿರುವುದು ಅವಶ್ಯಕ. ವಿವರಗಳಿಗಾಗಿ ಈ ಲಿಂಕ್ ನೋಡಿ.

**ಯೋಜನಾ ಪ್ರಸ್ತಾವನೆಗಳನ್ನು ಕಳುಹಿಸಬೇಕಾದ ಕ್ರಮ:**

ನಿಮ್ಮ ಸ್ವವಿವರ(ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಮಿಂಚಂಚೆಯನ್ನೊಳಗೊಂಡಂತೆ)ಹಾಗೂ ಯೋಜನಾ ಪ್ರಸ್ತಾವನೆಯನ್ನು ಕೆಳಕಂಡ ವಿಷಯಗಳನ್ನೊಳಗೊಂಡಂತೆ ಕಳುಹಿಸಿ:

- ನಿಮ್ಮ ಪ್ರಸ್ತುತ ಕಲಾ ಅಭ್ಯಾಸ, ಕಲಾವಿದರಾಗಿ ಕಾಳಜಿಗಳು ಹಾಗೂ ಆಸಕ್ತಿಗಳು
- ನೀವು ಉದ್ದೇಶಿಸಿರುವ ಕಲಾ ನಿರ್ಮಾಣದ ವಿವರಗಳು ಹಾಗೂ ಕಾರಣಗಳು
- ವಿಸ್ತೃತ ಸಮಯಸೂಚಿ ಹಾಗೂ ಬಜೆಟ್
- ನಿಮ್ಮ ಈ ಹಿಂದಿನ ಕೆಲಸದ ಉದಾಹರಣೆಗಳು

**ಪ್ರಸ್ತಾವನೆಗಳ ಸಲ್ಲಿಸುವಿಕೆ:**

- ನೀವು ಇಂಗ್ಲಿಷ್ ಸೇರಿದಂತೆ ಯಾವುದೇ ಭಾರತೀಯ ಭಾಷೆಯಲ್ಲಿ ಪ್ರಸ್ತಾವನೆಯನ್ನು ಕಳುಹಿಸಬಹುದು. ಐ ಎಫ್ ಎ ಇಂಗ್ಲಿಷ್ ಹೊರತಾಗಿ ಇತರ ಭಾರತೀಯ ಭಾಷೆಗಳ ಯೋಜನೆಗಳಿಗೆ ಪ್ರೋತ್ಸಾಹ ನೀಡುತ್ತದೆ.
- ಪ್ರಸ್ತಾವನೆಯನ್ನು ಸಲ್ಲಿಸುವ ಮೊದಲು ನಿಮ್ಮ ಯೋಜನಾ ಪರಿಕಲ್ಪನೆಗಳು/ ಪ್ರಶ್ನೆಗಳನ್ನು ಚರ್ಚಿಸಲು ಬಯಸಿದಲ್ಲಿ, ಜೂನ್ **21, 2024**ರ ಒಳಗೆ **mridupankhi@indiaifa.org** ಅವರಿಗೆ ಇಮೇಲ್ ಕಳುಹಿಸಬಹುದು.
- ನಿಮ್ಮ ಅಂತಿಮ ಪ್ರಸ್ತಾವನೆಯನ್ನು ಎಲ್ಲ ಸಹಾಯಕ ವಿವರಗಳೊಂದಿಗೆ 25MB ಮೀರದ ಒಂದೇ ಇಮೇಲ್ ಮುಖಾಂತರ **mridupankhi@indiaifa.org** ಇವರಿಗೆ ಜುಲೈ **05, 2024**ರಂದು ಅಥವಾ ಅದಕ್ಕೆ ಮೊದಲು ಕಳುಹಿಸಿ.

ಅಪೂರ್ಣ ಪ್ರಸ್ತಾವನೆಗಳು ಹಾಗೂ ಅರ್ಹತೆಯ ಮಾನದಂಡಕ್ಕೆ ಒಳಪಡದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ಆಯ್ಕೆಯ ಪ್ರಕ್ರಿಯೆ:**
ಕೊನೆಯ ಸುತ್ತಿಗೆ ಆಯ್ಕೆಯಾದ ಪ್ರಸ್ತಾವನೆಗಳನ್ನು ಬಾಹ್ಯ ತಜ್ಞರ ಆಯ್ಕೆ ಸಮಿತಿ ಮೌಲ್ಯಮಾಪನ ಮಾಡುತ್ತದೆ. ಇದಕ್ಕಾಗಿ ಅರ್ಜಿದಾರರು ತಮ್ಮ ಯೋಜನೆಯ ಪರಿಕಲ್ಪನೆಯನ್ನು ಈ ಸಮಿತಿಯ ಮುಂದೆ ಪ್ರತಿಪಾದಿಸಬೇಕಾಗುತ್ತದೆ. ಆಯ್ಕೆಯಾದ ಯೋಜನೆಗಳನ್ನು ಸೆಪ್ಟೆಂಬರ್ 2024ರಲ್ಲಿ ಘೋಷಿಸಲಾಗುವುದು

ಆಯ್ಕೆಯಾದ ಎಲ್ಲ ಯೋಜನೆಗಳನ್ನೂ ಐ ಎಫ್ ಎ ಸಂಸ್ಥೆ ಕಾರ್ಯಗತಗೊಳಿಸುತ್ತದೆ.

ಐ ಎಫ್ ಎ ಸಂಸ್ಥೆ ಮಕ್ಕಳನ್ನೊಳಗೊಂಡಂತೆ ಎಲ್ಲರಿಗೂ ಬೆಂಬಲ, ಗೌರವ, ರಕ್ಷಣೆ ನೀಡುವ ಸುರಕ್ಷಿತ ವಾತಾವರಣವನ್ನು ನಿರ್ಮಿಸಲು ಬದ್ಧವಾಗಿದೆ. ಎಲ್ಲ ಅರ್ಜಿದಾರರೂ ಇದಕ್ಕೆ ಬದ್ಧವಾಗಿದ್ದು, ಇದನ್ನು ಸದಾ ಎತ್ತಿಹಿಡಿಯಬೇಕು.